ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು 91 ದೌರ್ಜನ್ಯ ಪ್ರಕರಣಗಳ ನೊಂದಾಯಿಸಿದೆ.

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001–2004 ರವರಿಗೆ ಒಟ್ಟು 23 ಪ್ರಕರಣಗಳು ನೊಂದಾಯಿಸಿದೆ.

ಇವುಗಳಲ್ಲಿ ಸಜಾ ಆದ ಪ್ರಕರಣಗಳು ಇರುವುದಿಲ್ಲ.

200 (425) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿಗಳು ಯಾವ ಯಾವುವು?

ಆ) 2001 ರಿಂದ 2004 ಸಾಲಿನ ವರೆಗೆ ಬಂದ ವರಮಾನವೆಷ್ಟು?

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟರಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರ ಪರವಾನಿಗೆ ನೀಡಿದೆಯೇ?

ಈ) ಈ ಲಾಟಿಗಳನ್ನು ನಿಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿ ವಿಷಯಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2001 ರಿಂದ 2004ರ ಸಾಲಿನವರೆಗೆ ಬಂದ ವರಮಾನ ಈ ಕೆಳಕಂಡಂತಿದೆ.

2001–02 – ರೂ. 10.46 ಕೋಟಿ
2002–03 – ರೂ. 12.25 ಕೋಟಿ
2003–04 – ರೂ. 50.00 ಕೋಟಿ

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೊರ ರಾಜ್ಯದ ಲಾಟರಿ ಟಿಕೇಟುಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡಲು ಪರವಾನಗಿ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಯಾವುದೇ ರಾಜ್ಯಕ್ಕೆ ತನ್ನ ರಾಜ್ಯದ ಲಾಟರಿ ಟಿಕೇಟುಗಳನ್ನು ಮಾರಾಟಮಾಡಲು ಪರವಾನಗಿ ನೀಡಿರುವುದಿಲ್ಲ.

ಈ) ಲಾಟರಿ (ರೆಗ್ಯುಲೇಷನ್) ಆಕ್ಟ್ 98ರನ್ವಯ ಕರ್ನಾಟಕ ತನ್ನ ರಾಜ್ಯದ ಲಾಟರಿ ನಡೆಸುತ್ತಾ ಹೊರ ರಾಜ್ಯದ ಲಾಟರಿ ಮಾರಾಟವನ್ನು ನಿಷೇಧಿಸಲು ಅವಕಾಶವಿರುವುದಿಲ್ಲ. ಆದರೆ ಲಾಟರಿ (ರೆಗ್ಯುಲೇಷನ್) ಆಕ್ಟ್ 98ಕ್ಕೆ ವಿರುದ್ಧವಾಗಿ ಯಾವುದೇ ರಾಜ್ಯ ತನ್ನ ಲಾಟರಿ ಟಿಕೇಟ್ ಮಾರಾಟ ಮಾಡಿದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಾಗಿದೆ. ಹೊರರಾಜ್ಯದ ಲಾಟರಿಯನ್ನು ನಿಷೇಧಿಸಬೇಕಾದಲ್ಲಿ ಕರ್ನಾಟಕವನ್ನು ಲಾಟರಿ ಮುಕ್ತವಲಯವನ್ನಾಗಿ ಘೋಷಿಸಬೇಕಾಗುತ್ತದೆ.

ಅನುಬಂಧ

ಕರ್ನಾಟಕ ರಾಜ್ಯ ಸಾಂಪ್ರದಾಯಿಕ ಲಾಟರಿ

	ಪೂರ್ವಾಹ್ನ 11.00 ಗಂಟೆಗೆ	12.00 ಗಂಟೆಗೆ	1.00 ಗಂಟೆಗೆ	2.00 ಗಂಟೆಗೆ	3.00 ಗಂಟೆಗೆ	4.00 ಗಂಟೆಗೆ	5.00 ಗಂಟೆಗೆ
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಸೋಮವಾರ	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್	ಡೈಮೆಂಡ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಮಂಗಳವಾರ	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್	ಗೋಲ್ಡ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಬುಧವಾರ	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್	ಸಿಲ್ವರ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಗುರುವಾರ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ	ಪ್ಲಾಟಿನಂ
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಶುಕ್ರವಾರ	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್	ಪರ್ಲ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಶನಿವಾರ	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್	ಸೂಪರ್
ಪ್ರತಿ	ಭಾಗ್ಯಲಕ್ಷ್ಮಿ	ಯೋಗಲಕ್ಷ್ಮಿ	ಐಶ್ವರ್ಯಲಕ್ಷ್ಮಿ	ಶ್ರೀಲಕ್ಷ್ಮಿ	ಧನಲಕ್ಷ್ಮಿ	ಕನಕಲಕ್ಷ್ಮಿ	ರಾಜಲಕ್ಷ್ಮಿ
ಭಾನುವಾರ	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್	ಸ್ಟಾರ್

ಟಿಪ್ಪಣಿ:

1. ಸಧ್ಯ ಪ್ರತಿ ಡ್ರಾನಲ್ಲಿ ಮುದ್ರಿಸುವ ಟಿಕೇಟ್‌ಗಳ ಸಂಖ್ಯೆಯನ್ನು ದಿನಾಂಕ: 13.12.2004 ರಿಂದ 10 ಲಕ್ಷಕ್ಕೆ ಹೆಚ್ಚಿಸಲಾಗಿದೆ.
2. ಪ್ರತಿ ಟಿಕೇಟಿನ ಬೆಲೆ ರೂ. 10/-
3. ಮೊದಲ ಬಹುಮಾನ ರೂ. 50,000/-ಗಳ ಒಂದು ಬಹುಮಾನ.
4. ಎರಡನೇ ಬಹುಮಾನ ರೂ. 5,000/-ಗಳ 10 ಬಹುಮಾನ.
5. ಮೂರನೇ ಬಹುಮಾನ ರೂ. 500/- ರಿಂದ ಪ್ರತಿ ಡ್ರಾಗೆ ರೂ. 25/- ಹೆಚ್ಚಳದಂತೆ ರೂ. 1700/-ರ ಒಟ್ಟು 10 ಬಹುಮಾನಗಳು.
6. ನಾಲ್ಕನೇ ಬಹುಮಾನ ರೂ. 80/-ರ ದಿನಾಂಕ: 1.12.2004 ರಿಂದ ರೂ. 80/-ರ 1,00,000 ಬಹುಮಾನಗಳು.

ಸಾಪ್ತಾಹಿಕ ಡ್ರಾಗಳ ವಿವರ

ಕ್ರ.ಸಂ.	ಡ್ರಾ ವಿವರ	ಡ್ರಾ ದಿನ	ವೇಳೆ	ಟಿಕೇಟಿನ ಬೆಲೆ	ಮುದ್ರಿಸಿದ ಟಿಕೇಟುಗಳ ಸಂಖ್ಯೆ
1.	ನಂದಿ ಸಾಪ್ತಾಹಿಕ ಡ್ರಾ	ಪ್ರತಿ ಸೋಮವಾರ	ಸಂಜೆ 4.15 ಕ್ಕೆ	ರೂ. 5/-	4.5 ಲಕ್ಷ
2.	ಚೇತನ ಸಾಪ್ತಾಹಿಕ ಡ್ರಾ	ಪ್ರತಿ ಮಂಗಳವಾರ	ಸಂಜೆ 4.15ಕ್ಕೆ	ರೂ. 2/-	5 ಲಕ್ಷ
3.	ಕಪಿಲಾ ಸಾಪ್ತಾಹಿಕ ಡ್ರಾ	ಪ್ರತಿ ಶನಿವಾರ	ಸಂಜೆ 4.15ಕ್ಕೆ	ರೂ. 2/-	5 ಲಕ್ಷ
4.	ಮಾನಸ ಸಾಪ್ತಾಹಿಕ ಡ್ರಾ	ಪ್ರತಿ ಬುಧವಾರ	ಸಂಜೆ 4.15 ಕ್ಕೆ	ರೂ. 5/-	4.5 ಲಕ್ಷ

ಪಾಕ್ಷಿಕ ಡ್ರಾಗಳ ವಿವರ

ಕ್ರ.ಸಂ.	ಡ್ರಾ ವಿವರ	ಡ್ರಾ ದಿನ	ವೇಳೆ	ಟಿಕೇಟಿನ ಬೆಲೆ	ಮುದ್ರಿಸಿದ ಟಿಕೇಟುಗಳ ಸಂಖ್ಯೆ
1.	ಅದೃಷ್ಟ ನಿಧಿ ಪಾಕ್ಷಿಕ	ಶುಕ್ರವಾರ	ಸಂಜೆ 4.15 ಕ್ಕೆ	ರೂ. 10/-	4 ಲಕ್ಷ
2.	ಆಶಾನಿಧಿ ಮಾಸಿಕ ಡ್ರಾ	ಶುಕ್ರವಾರ	ಸಂಜೆ 4.15ಕ್ಕೆ	ರೂ. 20/-	4.5 ಲಕ್ಷ